The Academic
International Journal of Multidisciplinary Research

An Online Peer Reviewed / Refereed Journal
Volume 4 | Special Issue 3 | April 2026
ISSN: 2583-973X (Online)
Website: www.theacademic.in

# ಕನ್ನಡ ಸಾಹಿತ್ಯದ ಓದಿನ ವಿಭಿನ್ನ ರೂಪಗಳು

-ಶ್ರೀನಿವಾಸ. ಎಸ್

ಕನ್ನಡ ಸಹಾಯಕ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಗಾರು ತಿರುಪತಿ, ಕೋಲಾರ -563116. ಮೊಬೈಲ್ ಇ -ಮೇಲ್: Srinivasas3988@gmail.com

**DOI : https://doi.org/10.5281/zenodo.20100052**

**ARTICLE DETAILS**

**Research Paper**

**Accepted:** 04-04-2026

**Published:** 25-04-2026

**ABSTRACT**

ಕನ್ನಡ ಸಾಹಿತ್ಯ ಪರಂಪರೆಯು ಸುಮಾರು ಸಾವಿರಾರು ವರ್ಷಗಳ ಇತಿಹಾಸದ ಚರಿತ್ರೆಯನ್ನು ಹೊಂದಿದೆ. ಈ ದೀರ್ಘ ಸಾಹಿತ್ಯ ಪರಂಪರೆಯನ್ನು ವಿವಿಧ ಕಾಲಘಟ್ಟಗಳಲ್ಲಿ ವಿಭಿನ್ನ ದೃಷ್ಟಿಕೋಣಗಳಿಂದ ಓದಲಾಗಿದೆ. ಪ್ರಾಚೀನ ಕಾಲದಲ್ಲಿ ಧಾರ್ಮಿಕ ಮತ್ತು ನೈತಿಕ ದೃಷ್ಟಿಯಿಂದ ಓದಲಾಗುತ್ತಿದ್ದ ಸಾಹಿತ್ಯ, ನಂತರದ ಕಾಲದಲ್ಲಿ ಸಾಮಾಜಿಕ, ತಾತ್ವಿಕ ಮತ್ತು ವಿಮರ್ಶಾತ್ಮಕ ದೃಷ್ಟಿಯಿಂದ ಓದಲಾರಂಭವಾಯಿತು. ಆದ್ದರಿಂದ ಕನ್ನಡ ಸಾಹಿತ್ಯದ ಅರ್ಥವನ್ನು ಸಮಗ್ರವಾಗಿ ತಿಳಿಯಲು ಅದರ ಓದಿನ ವಿವಿಧ ರೂಪಗಳನ್ನು ತಿಳಿದುಕೊಳ್ಳುವುದು ಅತ್ಯಂತ ಮುಖ್ಯವಾಗಿದೆ.

ಸಾಹಿತ್ಯವು ಮಾನವ ಜೀವನದ ಆಳವಾದ ಅನುಭವಗಳನ್ನು ವ್ಯಕ್ತಪಡಿಸುವ ಪ್ರಮುಖ ಕಲೆ. ಸಮಾಜದ ಚಿಂತನೆ, ಸಂಸ್ಕೃತಿ, ಧರ್ಮ, ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಗಳು ಸಾಹಿತ್ಯದಲ್ಲಿ ಪ್ರತಿಫಲಿಸುತ್ತವೆ. ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ಕೇವಲ ಪಠ್ಯವನ್ನು ಓದುವುದಷ್ಟೇ ಸಾಕಾಗುವುದಿಲ್ಲ; ಅದರ ಹಿಂದೆ ಇರುವ ಸಾಂಸ್ಕೃತಿಕ, ಐತಿಹಾಸಿಕ ಮತ್ತು ತಾತ್ವಿಕ ಹಿನ್ನೆಲೆಯನ್ನು ಗ್ರಹಿಸುವುದು ಅಗತ್ಯವಿದೆ. ಈ ಪ್ರಕ್ರಿಯೆಯನ್ನೇ "ಸಾಹಿತ್ಯ ಓದು" ಎಂದು ಕರೆಯಲಾಗುತ್ತದೆ. ಓದು ಎಂದರೆ ಕೇವಲ ಅಕ್ಷರಗಳ ಗ್ರಹಿಕೆ ಅಲ್ಲ; ಅದು ಅರ್ಥ ನಿರ್ಮಾಣದ ಕ್ರಿಯೆ. ಸಾಹಿತ್ಯದ ಅರ್ಥವು ಲೇಖಕ, ಪಠ್ಯ ಮತ್ತು ಓದುಗರ ನಡುವಿನ ಪರಸ್ಪರ ಸಂಬಂಧದಿಂದ ನಿರ್ಮಾಣವಾಗುತ್ತದೆ.

ಸಾಹಿತ್ಯವು ಮಾನವ ಸಮಾಜದ ಚಿಂತನೆ, ಸಂಸ್ಕೃತಿ ಮತ್ತು ಅನುಭವಗಳ ಪ್ರತಿಬಿಂಬವಾಗಿದೆ. ಸಾಹಿತ್ಯವನ್ನು ಅರ್ಥಮಾಡಿಕೊಳ್ಳುವ ಪ್ರಕ್ರಿಯೆಯನ್ನು "ಓದು" ಎಂದು ಕರೆಯಲಾಗುತ್ತದೆ. ಆದರೆ ಸಾಹಿತ್ಯ ಓದು ಒಂದೇ ರೀತಿಯಲ್ಲಿ ನಡೆಯುವುದಿಲ್ಲ ಕಾಲದ ಬದಲಾವಣೆಗಳು, ಸಾಮಾಜಿಕ ಚಿಂತನೆಗಳು ಮತ್ತು ತತ್ವಶಾಸ್ತ್ರೀಯ

ಧೋರಣೆಗಳು ಓದುವ ವಿಧಾನಗಳನ್ನು ಬದಲಾಯಿಸುತ್ತವೆ. ಕನ್ನಡ ಸಾಹಿತ್ಯದಲ್ಲಿಯೂ ಸಾಂಪ್ರದಾಯಿಕ ಓದು, ಸೌಂದರ್ಯಾತ್ಮಕ ಓದು, ಸಾಮಾಜಿಕ ಓದು, ಐತಿಹಾಸಿಕ ಓದು, ಸ್ತ್ರೀವಾದಿ ಓದು, ಮಾರ್ಕ್ಸ್‌ವಾದಿ ಓದು, ಮನೋವೈಜ್ಞಾನಿಕ ಓದು, ವಾಚಕ ಕೇಂದ್ರಿತ ಓದು ಮತ್ತು ಉತ್ತರಾಧುನಿಕ ಓದು ಮುಂತಾದ ವಿವಿಧ ವಿಧಾನಗಳು ಕಾಣಿಸಿಕೊಳ್ಳುತ್ತವೆ. ಈ ನನ್ನ ಪ್ರಬಂಧದಲ್ಲಿ ಕನ್ನಡ ಸಾಹಿತ್ಯವನ್ನು ಓದುವ ಈ ವಿಭಿನ್ನ ರೂಪಗಳನ್ನು ವಿಶ್ಲೇಷಿಸಿ ಅವುಗಳ ವೈಶಿಷ್ಟ್ಯ ಮತ್ತು ಪ್ರಸ್ತುತತೆಯನ್ನು ಪರಿಶೀಲಿಸಲಾಗಿದೆ.

**ಪರಿಚಯ**

ಕನ್ನಡ ಸಾಹಿತ್ಯ ಪರಂಪರೆಯು ಸುಮಾರು ಸಾವಿರಾರು ವರ್ಷಗಳ ಇತಿಹಾಸದ ಚರಿತ್ರೆಯನ್ನು ಹೊಂದಿದೆ. ಈ ದೀರ್ಘ ಸಾಹಿತ್ಯ ಪರಂಪರೆಯನ್ನು ವಿವಿಧ ಕಾಲಘಟ್ಟಗಳಲ್ಲಿ ವಿಭಿನ್ನ ದೃಷ್ಟಿಕೋಣಗಳಿಂದ ಓದಲಾಗಿದೆ. ಪ್ರಾಚೀನ ಕಾಲದಲ್ಲಿ ಧಾರ್ಮಿಕ ಮತ್ತು ನೈತಿಕ ದೃಷ್ಟಿಯಿಂದ ಓದಲಾಗುತ್ತಿದ್ದ ಸಾಹಿತ್ಯ, ನಂತರದ ಕಾಲದಲ್ಲಿ ಸಾಮಾಜಿಕ, ತಾತ್ವಿಕ ಮತ್ತು ವಿಮರ್ಶಾತ್ಮಕ ದೃಷ್ಟಿಯಿಂದ ಓದಲಾರಂಭವಾಯಿತು. ಆದ್ದರಿಂದ ಕನ್ನಡ ಸಾಹಿತ್ಯದ ಅರ್ಥವನ್ನು ಸಮಗ್ರವಾಗಿ ತಿಳಿಯಲು ಅದರ ಓದಿನ ವಿವಿಧ ರೂಪಗಳನ್ನು ತಿಳಿದುಕೊಳ್ಳುವುದು ಅತ್ಯಂತ ಮುಖ್ಯವಾಗಿದೆ.

ಸಾಹಿತ್ಯವು ಮಾನವ ಜೀವನದ ಆಳವಾದ ಅನುಭವಗಳನ್ನು ವ್ಯಕ್ತಪಡಿಸುವ ಪ್ರಮುಖ ಕಲೆ. ಸಮಾಜದ ಚಿಂತನೆ, ಸಂಸ್ಕೃತಿ, ಧರ್ಮ, ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಗಳು ಸಾಹಿತ್ಯದಲ್ಲಿ ಪ್ರತಿಫಲಿಸುತ್ತವೆ. ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ಕೇವಲ ಪಠ್ಯವನ್ನು ಓದುವುದಷ್ಟೇ ಸಾಕಾಗುವುದಿಲ್ಲ; ಅದರ ಹಿಂದೆ ಇರುವ ಸಾಂಸ್ಕೃತಿಕ, ಐತಿಹಾಸಿಕ ಮತ್ತು ತಾತ್ವಿಕ ಹಿನ್ನೆಲೆಯನ್ನು ಗ್ರಹಿಸುವುದು ಅಗತ್ಯವಿದೆ. ಈ ಪ್ರಕ್ರಿಯೆಯನ್ನೇ "ಸಾಹಿತ್ಯ ಓದು" ಎಂದು ಕರೆಯಲಾಗುತ್ತದೆ. ಓದು ಎಂದರೆ ಕೇವಲ ಅಕ್ಷರಗಳ ಗ್ರಹಿಕೆ ಅಲ್ಲ; ಅದು ಅರ್ಥ ನಿರ್ಮಾಣದ ಕ್ರಿಯೆ. ಸಾಹಿತ್ಯದ ಅರ್ಥವು ಲೇಖಕ, ಪಠ್ಯ ಮತ್ತು ಓದುಗರ ನಡುವಿನ ಪರಸ್ಪರ ಸಂಬಂಧದಿಂದ ನಿರ್ಮಾಣವಾಗುತ್ತದೆ.

ಸಾಹಿತ್ಯವು ಮಾನವ ಸಮಾಜದ ಚಿಂತನೆ, ಸಂಸ್ಕೃತಿ ಮತ್ತು ಅನುಭವಗಳ ಪ್ರತಿಬಿಂಬವಾಗಿದೆ. ಸಾಹಿತ್ಯವನ್ನು ಅರ್ಥಮಾಡಿಕೊಳ್ಳುವ ಪ್ರಕ್ರಿಯೆಯನ್ನು "ಓದು" ಎಂದು ಕರೆಯಲಾಗುತ್ತದೆ. ಆದರೆ ಸಾಹಿತ್ಯ ಓದು ಒಂದೇ ರೀತಿಯಲ್ಲಿ ನಡೆಯುವುದಿಲ್ಲ ಕಾಲದ ಬದಲಾವಣೆಗಳು, ಸಾಮಾಜಿಕ ಚಿಂತನೆಗಳು ಮತ್ತು ತತ್ವಶಾಸ್ತ್ರೀಯ ಧೋರಣೆಗಳು ಓದುವ ವಿಧಾನಗಳನ್ನು ಬದಲಾಯಿಸುತ್ತವೆ. ಕನ್ನಡ ಸಾಹಿತ್ಯದಲ್ಲಿಯೂ ಸಾಂಪ್ರದಾಯಿಕ ಓದು, ಸೌಂದರ್ಯಾತ್ಮಕ ಓದು, ಸಾಮಾಜಿಕ ಓದು, ಐತಿಹಾಸಿಕ ಓದು, ಸ್ತ್ರೀವಾದಿ ಓದು, ಮಾರ್ಕ್ಸ್‌ವಾದಿ ಓದು, ಮನೋವೈಜ್ಞಾನಿಕ ಓದು, ವಾಚಕ ಕೇಂದ್ರಿತ ಓದು ಮತ್ತು ಉತ್ತರಾಧುನಿಕ ಓದು ಮುಂತಾದ ವಿವಿಧ ವಿಧಾನಗಳು ಕಾಣಿಸಿಕೊಳ್ಳುತ್ತವೆ. ಈ ನನ್ನ ಪ್ರಬಂಧದಲ್ಲಿ ಕನ್ನಡ ಸಾಹಿತ್ಯವನ್ನು ಓದುವ ಈ ವಿಭಿನ್ನ ರೂಪಗಳನ್ನು ವಿಶ್ಲೇಷಿಸಿ ಅವುಗಳ ವೈಶಿಷ್ಟ್ಯ ಮತ್ತು ಪ್ರಸ್ತುತತೆಯನ್ನು ಪರಿಶೀಲಿಸಲಾಗಿದೆ.

**ಸಾಂಪ್ರದಾಯಿಕ ಓದು**

ಸಾಂಪ್ರದಾಯಿಕ ಓದು ಸಾಹಿತ್ಯದ ಅತ್ಯಂತ ಪ್ರಾಚೀನ ಓದುವ ವಿಧಾನವಾಗಿದೆ. ಈ ಓದಿನಲ್ಲಿ ಕೃತಿಯ ಮೂಲ ಅರ್ಥ, ಕಥಾ ಸಾರ ಮತ್ತು ಲೇಖಕರ ಉದ್ದೇಶ ಮುಖ್ಯವಾಗಿರುತ್ತದೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕವಿಗಳು ಧಾರ್ಮಿಕ ಮತ್ತು ನೈತಿಕ ಮೌಲ್ಯಗಳನ್ನು ಪ್ರತಿಪಾದಿಸುವುದನ್ನು ಮುಖ್ಯ ಉದ್ದೇಶವಾಗಿಟ್ಟುಕೊಂಡಿದ್ದರು. ಆದ್ದರಿಂದ ಪಂಪ, ರನ್ನ, ಜನ್ನ ಮುಂತಾದ ಕವಿಗಳ ಕೃತಿಗಳನ್ನು ಓದುವಾಗ ಅವರ ಕಾಲದ ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಓದಲಾಗುತ್ತಿತ್ತು.

ಈ ಓದಿನಲ್ಲಿ ಸಾಹಿತ್ಯವು ಧರ್ಮ ಮತ್ತು ನೈತಿಕತೆಯ ಮಾರ್ಗದರ್ಶನ ನೀಡುವ ಸಾಧನವೆಂದು ಪರಿಗಣಿಸಲಾಗುತ್ತದೆ. ಪಂಪ ತನ್ನ ಆದಿಪುರಾಣದಲ್ಲಿ (ಪೂರ್ವ ಭವಾವಳಿ, ೧ನೆ ಪೀಠಿಕೆ) ಯಲ್ಲಿ ಹೀಗೆ ಹೇಳ್ತಾನೆ.

ಇದುವೆ ಸುಕವಿ ಪ್ರಮೋದ
ಪ್ರದಮಿದುವೆ ಸಮಸ್ತ ಭವ್ಯ ಲೋಕ ಪ್ರಮುದ
ಪ್ರದಮೆನೆ ನೆಗಲ್ದಾದಿ ಪುರಾ
ನದೊಳರಿವುದು ಕಾವ್ಯ ಧರ್ಮಮಂ ಧರ್ಮಮುಮಂ

ಈ ಕಂದಪದ್ಯದಲ್ಲಿ ಕೊನೆಯ ಸಾಲು ನಮಗೆ ಸ್ವಲ್ಪ ಮುಖ್ಯ. "ಆದಿಪುರಾಣದೊಳರಿವುದು ಕಾವ್ಯ ಧರ್ಮಮಂ ಧರ್ಮಮುಮಂ " ಪಂಪ ತನ್ನ ಆದಿಪುರಾಣದಲ್ಲಿ ಕಾವ್ಯ ಧರ್ಮ ಇದೆ, ಧರ್ಮವೂ ಇದೆ ಅನ್ನುತ್ತಾನೆ. ಈ ಹಿನ್ನಲೆಯಲ್ಲಿ “ಸಾಹಿತ್ಯವು ಸಮಾಜದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕನ್ನಡಿ” ಎನ್ನಬಹುದು.

ಬಸವಣ್ಣನ ಈ ವಚನ ಗಮನಿಸೋದಾದರೆ

ದಯವಿಲ್ಲದಾ ಧರ್ಮವಾವುದಯ್ಯಾ,
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲಿ
ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ

ಇಲ್ಲಿಯೂ ಸಹ ಬಸವಣ್ಣ ನ ಧರ್ಮ ಪದ ಬಳಕೆ religion ಪದವನ್ನೇ ಸೂಚಿಸುತ್ತೆ. ಪ್ರಾಣಿಬಲಿ, ಬಲವಿಲ್ಲದ ಜನರ ಅವಮಾನ, ಶೋಷಣೆ ಇವನ್ನೆಲ್ಲ ಒಂದು ಕಾಲದಲ್ಲಿ (ಮತ್ತು ಈಗಲೂ) ಧರ್ಮದ / religion ನ ಆಚರಣೆಯೇ ಅಂತ ತಿಳಿದವರಿದ್ದರು. ಇಂತ ಧರ್ಮಾಚರಣೆ ಬಗ್ಗೆನೆ ಬಸವಣ್ಣ ಹೇಳ್ತಾ ಇರೋದು.

**ಸೌಂದರ್ಯಾತ್ಮಕ ಓದು**

ಸೌಂದರ್ಯಾತ್ಮಕ ಓದು ಸಾಹಿತ್ಯದ ಕಲಾತ್ಮಕ ಗುಣಗಳನ್ನು ಅರಿಯುವ ವಿಧಾನವಾಗಿದೆ. ಈ ಓದಿನಲ್ಲಿ ಭಾಷೆಯ ಸೊಗಸು, ಅಲಂಕಾರಗಳು, ರೂಪಕಗಳು, ಛಂದಸ್ಸು ಮತ್ತು ಶೈಲಿಯನ್ನು ಗಮನಿಸಲಾಗುತ್ತದೆ. ಕನ್ನಡ ಕಾವ್ಯ ಸಾಹಿತ್ಯದಲ್ಲಿ ಈ ಓದಿನ

ಪ್ರಾಮುಖ್ಯತೆ ಹೆಚ್ಚು ಕಾಣುತ್ತದೆ. ಕವಿತೆಯ ರಸ, ಧ್ವನಿ, ಲಯ ಮತ್ತು ಭಾವನಾತ್ಮಕತೆಗಳನ್ನು ವಿಶ್ಲೇಷಿಸುವ ಮೂಲಕ ಅದರ ಸೌಂದರ್ಯವನ್ನು ಅನುಭವಿಸಲಾಗುತ್ತದೆ. ಸಾಹಿತ್ಯವು ಕೇವಲ ಸಂದೇಶವಲ್ಲ; ಅದು ಕಲಾತ್ಮಕ ಅನುಭವವೂ ಆಗಿದೆ ಎಂಬುದನ್ನು ಈ ಓದು ಒತ್ತಿಹೇಳುತ್ತದೆ.

ಶ್ರೀ ವಿಜಯನ (ಸು.850) ಕವಿರಾಜಮಾರ್ಗ ಕನ್ನಡದಲ್ಲಿ ಉಪಲಬ್ಧವಾದ ಅತ್ಯಂತ ಪ್ರಾಚೀನ ಅಲಂಕಾರ ಗ್ರಂಥ. ಇದು ದಂಡಿಯ ಕಾವ್ಯಾದರ್ಶದ ಮಾದರಿಯಲ್ಲಿ ರಚಿತವಾಗಿದೆ. ಇದರಲ್ಲಿ ಮೂರು ಅಧ್ಯಾಯವಿದೆ. ಕಾವ್ಯಕ್ಕೆ ಸೌಂದರ್ಯವನ್ನು ತಂದುಕೊಡುವ ಎಲ್ಲವ ಅಲಂಕಾರವೆಂದು ಇವನ ಅಭಿಪ್ರಾಯ. ರಸಗಳಲ್ಲಿ ಇವನು ಶಾಂತವನ್ನು ಹೇಳಿರುವುದು ಗಮನಾರ್ಹವಾಗಿದೆ. ಈ ಗ್ರಂಥದಲ್ಲಿ ಕನ್ನಡ ನಾಡು, ನುಡಿಗಳ ಬಗ್ಗೆ, 850ಕ್ಕಿಂತ ಹಿಂದಿನ ಕನ್ನಡ ಸಾಹಿತ್ಯದ ಬಗ್ಗೆ, ಅನೇಕ ಕಾವ್ಯ ಪ್ರಕಾರಗಳ ಬಗ್ಗೆ ಹಲವು ಸ್ವಾರಸ್ಯಕರವಾದ ಹೇಳಿಕೆಗಳಿವೆ. ಎರಡನೆಯ ನಾಗವರ್ಮನ ಕಾವ್ಯಾವಲೋಕನದಲ್ಲಿ (ಸು.1042) ಐದು ಪರಿಚ್ಛೇದಗಳಿದ್ದು ಕೊನೆಯ ನಾಲ್ಕು ಅಲಂಕಾರ ಶಾಸ್ತ್ರಕ್ಕೆ ಮೀಸಲಾಗಿವೆ. ಇವನು ವಾಮನ, ರುದ್ರಟ, ಭಾಮಹ, ದಂಡಿ ಮುಂತಾದ ಸಂಸ್ಕೃತ ಅಲಂಕಾರಿಕರಿಂದ ವಿಷಯ ಸಂಗ್ರಹಿಸಿದ್ದಾನೆ. ಕವಿಸಮಯದ ಭಾಗಕ್ಕೆ ರಾಜಶೇಖರನಿಗೆ ಋಣಿಯಾಗಿರುವಂತೆ ತೋರುತ್ತದೆ. ಈತ ಧ್ವನಿಯ ಮಾತೆತ್ತಿದ್ದರೂ ಅದೂ ಒಂದು ಅಲಂಕಾರ ಎಂದಿದ್ದಾನೆ. ಕವಿಕಾಮನ ಶೃಂಗಾರರತ್ನಾಕರ (ಸು.1200) ರಸದ ವಿಷಯವನ್ನು ವಿಸ್ತಾರವಾಗಿ ಪ್ರತಿ ಪಾದಿಸುವ ಮೊದಲ ಕನ್ನಡ ಗ್ರಂಥ. ರಸಮೇ ಮೊದಲ್ ಕವಿತೆಗೆ ಎಂದೀತ ಹೇಳಿದ್ದಾನೆ. ಮಾಧವನ ಮಾಧವಾಲಂಕಾರ ಸಂಸ್ಕೃತ ಕಾವ್ಯಾದರ್ಶದ ಸರಳಾನುವಾದ. ಸಾಳ್ವನ ರಸರತ್ನಾಕರದಲ್ಲಿ (ಸು.1550) ವಿಸ್ತಾರವಾದ ರಸದ ಪ್ರತಿಪಾದನೆ ಇದೆ. ಇವನ ಇನ್ನೊಂದು ಗ್ರಂಥ ಶಾರದಾವಿಲಾಸದಲ್ಲಿ ಧ್ವನಿಯ ಬಗ್ಗೆ ಮೊತ್ತಮೊದಲು ವಿಸ್ತೃತ ಚರ್ಚೆ ದೊರೆಯುತ್ತದೆ. ಚಿಕ್ಕದೇವರಾಜ ಒಡೆಯರ ಕಾಲದಲ್ಲಿದ್ದ ತಿರುಮಲಾರ್ಯ ತನ್ನ ಅಪ್ರತಿಮವೀರಚರಿತದಲ್ಲಿ ಶಬ್ದಾಲಂಕಾರ, ಅರ್ಥಾಲಂಕಾರಗಳ ವಿವರಣೆಗಳನ್ನಿತ್ತಿದ್ದಾನೆ. ಜಾಯೇಂದ್ರ (1734) ಅಪ್ಪಯ್ಯ ದೀಕ್ಷಿತನ ಸಂಸ್ಕೃತ ಕುವಲಯಾನಂದವನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾನೆ. ಇವನ ಇನ್ನೊಂದು ಸ್ವಕೃತಿ ರಸಮಂಜರಿಯಲ್ಲಿ ನಾಯಕ, ನಾಯಿಕೆಯರ ಪ್ರಭೇದಗಳನ್ನು ವಿವರಿಸಲಾಗಿದೆ. ತಿಮ್ಮ ತನ್ನ ನವರಸಾಲಂಕಾರದಲ್ಲಿ (ಸು.1600 ಗ್ರಂಥ ಪ್ರಕಟವಾಗಿಲ್ಲ) ಮುಖ್ಯವಾಗಿ ಪುರ್ವಗ್ರಂಥಗಳಿಂದ, ಅದರಲ್ಲೂ ವಿಶೇಷವಾಗಿ ಸಾಳ್ವನ ರಸರತ್ನಾಕರ ಮತ್ತು ಕವಿಕಾಮನ ಶೃಂಗಾರ ರತ್ನಾಕರಗಳಿಂದ ರಸಲಕ್ಷಣಗಳನ್ನು ಇದ್ದಕ್ಕಿದ್ದಂತೆ ಎತ್ತಿಕೊಂಡು ಸಂಕಲನ ಗ್ರಂಥವೆನ್ನುವ ರೀತಿಯಲ್ಲಿ ಬರೆದಿದ್ದಾನೆ.

ಒಂದನೆಯ ನಾಗವರ್ಮನ (ಸು.990) ಛಂದೋಂಬುದಿ ದೊರೆತ ಛಂದೋಗ್ರಂಥಗಳಲ್ಲಿ ಪ್ರಾಚೀನವಾದುದು. ಆದರೆ ಇದಕ್ಕಿಂತ ಹಿಂದೆ 9ನೆಯ ಶತಮಾನದಲ್ಲಿ ಗುಣಗಾಂಕೀಯ ಎಂಬ ಛಂದೋಗ್ರಂಥವಿದ್ದಿತೆಂದು ಊಹಿಸಲು ಅವಕಾಶವಿದೆ. ಕವಿರಾಜಮಾರ್ಗದಲ್ಲಿ ಛಂದಸ್ಸಿಗೆ ಸಂಬಂಧಿಸಿದ ಅನೇಕ ಮುಖ್ಯ ಸಂಗತಿಗಳಿವೆ. ಆದರೂ ಛಂದೋಂಬುದಿ ಕನ್ನಡದ ಏಕೈಕ, ಅದಿಕೃತ ಪ್ರಾಚೀನ ಲಕ್ಷಣಗ್ರಂಥ (ನೋಡಿ: ನಾಗವರ್ಮ-1). ಜಯಕೀರ್ತಿಯ ಛಂದೋನುಶಾಸನ (ಏಳನೆಯ ಅಧ್ಯಾಯ), 3ನೆಯ ಸೋಮೇಶ್ವರನ ಮಾನಸೋಲ್ಲಾಸ, ಶಾಙರ್ಗ್‌ದೇವನ ಸಂಗೀತರತ್ನಾಕರ ಮುಂತಾದ ಸಂಸ್ಕೃತ ಗ್ರಂಥಗಳಲ್ಲಿ ಕನ್ನಡ ಛಂದಸ್ಸಿಗೆ ಸಂಬಂದಿಸಿದ ಅನೇಕ ಸಂಗತಿಗಳು ಪ್ರತಿಪಾದಿತವಾಗಿವೆ. 2ನೆಯ ನಾಗವರ್ಮನ ಛಂದೋವಿಚಿತಿ ಎಂಬ ಗ್ರಂಥ ಉಪಲಬ್ಧವಿಲ್ಲ. ಈಶ್ವರಕವಿಯ (ಸು.1500) ಕವಿಜಿಹ್ವಾಬಂಧನ, ಗುಣಚಂದ್ರನ ಛಂದಸ್ಸಾರ (ಸು.1650), ಶಾಲ್ಯದ ಕೃಷ್ಣರಾಜನ ಷಟ್ಪ್ರತ್ಯಯ

(1748), ವೀರಭದ್ರ ಕವಿಯ ನಂದಿ ಛಂದಸ್ಸು ಮುಂತಾದ ಛಂದೋಗ್ರಂಥಗಳಲ್ಲಿಯೂ ಕನ್ನಡ ಛಂದಸ್ಸಿನ ವಿಷಯಗಳು ಸ್ವಲ್ಪಮಟ್ಟಿಗೆ ನಿರೂಪಿತವಾಗಿವೆ.

**ಐತಿಹಾಸಿಕ ಓದು**

ಐತಿಹಾಸಿಕ ಓದು ಸಾಹಿತ್ಯವನ್ನು ಅದರ ಕಾಲಘಟ್ಟದ ಇತಿಹಾಸದೊಂದಿಗೆ ಸಂಬಂಧಿಸಿ ಓದುವ ವಿಧಾನವಾಗಿದೆ. ಪ್ರತಿಯೊಂದು ಸಾಹಿತ್ಯ ಕೃತಿಯೂ ತನ್ನ ಕಾಲದ ಸಮಾಜದ ಪರಿಸ್ಥಿತಿಗಳನ್ನು ಪ್ರತಿಬಿಂಬಿಸುತ್ತದೆ. ಉದಾಹರಣೆಗೆ ನವೋದಯ ಕಾಲದ ಸಾಹಿತ್ಯವನ್ನು ಓದುವಾಗ ಬ್ರಿಟಿಷ್ ಆಳ್ವಿಕೆಯ ಕಾಲದ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳನ್ನು ಗಮನಿಸಬೇಕು. ಐತಿಹಾಸಿಕ ಓದು ಸಾಹಿತ್ಯವನ್ನು ಕಾಲಪರಿಧಿಯಲ್ಲಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.

ಹಳಗನ್ನಡ ಕಾಲ (ಸು. ಕ್ರಿ.ಶ. ೯ - ೧೨ನೇ ಶತಮಾನ) ವೈಶಿಷ್ಟ್ಯ: ಜೈನ ಧರ್ಮದ ಪ್ರಭಾವ, ಚಂಪೂ ಶೈಲಿ (ಗದ್ಯ-ಪದ್ಯ ಮಿಶ್ರಿತ). ಪ್ರಮುಖ ಕವಿಗಳು ಪಂಪ (ವಿಕ್ರಮಾರ್ಜುನ ವಿಜಯ/ಪಂಪ ಭಾರತ, ಆದಿಪುರಾಣ), ಪೊನ್ನ (ಶಾಂತಿನಾಥ ಪುರಾಣ), ರನ್ನ (ಗದಾಯುದ್ಧಂ/ಸಾಹಸಭೀಮ ವಿಜಯ).

ನಡುಗನ್ನಡ ಕಾಲ (ಸು. ಕ್ರಿ.ಶ. ೧೨ - ೧೮ನೇ ಶತಮಾನ) ವೈಶಿಷ್ಟ್ಯ: ವಚನ ಚಳುವಳಿ, ಭಕ್ತಿ ಸಾಹಿತ್ಯ, ಮತ್ತು ಹೊಸ ಛಂದಸ್ಸುಗಳ (ಷಟ್ಪದಿ, ಸಾಂಗತ್ಯ) ಉದಯ. ಮುಖ್ಯಾಂಶವೆಂದರೆ ೧೨ನೇ ಶತಮಾನದ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿಯ ವಚನಗಳು. ಪ್ರಮುಖ ಕವಿಗಳು: ಕುಮಾರವ್ಯಾಸ (ಕರ್ಣಾಟ ಭಾರತ ಕಥಾಮಂಜರಿ), ರಾಘವಾಂಕ (ಹರಿಶ್ಚಂದ್ರ ಕಾವ್ಯ), ರತ್ನಾಕರವರ್ಣಿ (ಭರತೇಶ ವೈಭವ).

ಹೊಸಗನ್ನಡ ಕಾಲ (೧೯ನೇ ಶತಮಾನದಿಂದ ಪ್ರಸ್ತುತ) ವೈಶಿಷ್ಟ್ಯ: ಪಾಶ್ಚಾತ್ಯ ಪ್ರಭಾವ, ಗದ್ಯ ಸಾಹಿತ್ಯದ ಅಭಿವೃದ್ಧಿ, ನವೋದಯ, ನವ್ಯ, ದಲಿತ, ಮತ್ತು ಬಂಡಾಯ ಸಾಹಿತ್ಯ

**ಸಾಮಾಜಿಕ ಓದು**

ಸಾಮಾಜಿಕ ಓದು ಸಾಹಿತ್ಯವನ್ನು ಸಮಾಜದ ಸಮಸ್ಯೆಗಳ ದೃಷ್ಟಿಯಿಂದ ವಿಶ್ಲೇಷಿಸುತ್ತದೆ. ಸಮಾಜದಲ್ಲಿರುವ ವರ್ಗಭೇದ, ಜಾತಿ ವ್ಯವಸ್ಥೆ, ಶೋಷಣೆ ಮತ್ತು ಸಮಾನತೆ ಮುಂತಾದ ವಿಚಾರಗಳನ್ನು ಇಲ್ಲಿ ಪರಿಶೀಲಿಸಲಾಗುತ್ತದೆ. ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯ ಮತ್ತು ದಲಿತ ಸಾಹಿತ್ಯವನ್ನು ಈ ದೃಷ್ಟಿಯಿಂದ ಓದಬಹುದು. ವಚನಕಾರರು ಸಮಾಜದ ಅಸಮಾನತೆಯನ್ನು ತೀವ್ರವಾಗಿ ಪ್ರಶ್ನಿಸಿದ್ದಾರೆ.

ಕನ್ನಡ ಸಾಹಿತ್ಯದ ಸಾಮಾಜಿಕ ಓದು ಎಂಬುದು ಸಮಾಜದ ಬದಲಾವಣೆ, ಸಂಘರ್ಷ ಮತ್ತು ಮೌಲ್ಯಗಳನ್ನು ಪ್ರತಿಬಿಂಬಿಸುವ ಪ್ರಕ್ರಿಯೆಯಾಗಿದೆ. 12ನೇ ಶತಮಾನದ ವಚನ ಸಾಹಿತ್ಯವು ವಚನ ಸಾಹಿತ್ಯದಲ್ಲಿ ಸಾಮಾಜಿಕ ಅಂಶಗಳು ಜಾತಿ, ಲಿಂಗ ಮತ್ತು ಧಾರ್ಮಿಕ ಸಮಾನತೆಗಾಗಿ ತೀವ್ರ ಸಾಮಾಜಿಕ ಹೋರಾಟ ನಡೆಸಿತು. ಈ ಕುರಿತು ಕನ್ನಡ ಸಾಹಿತ್ಯ - ವಿಕಿಪೀಡಿಯ ಮತ್ತು ಕನ್ನಡ ಸಾಹಿತ್ಯ ಪ್ರಕಾರಗಳು - ವಿಕಿಪೀಡಿಯ ಓದಬಹುದು. ಇದು ಶೋಷಣೆ, ಬಡತನ, ಹೆಣ್ಣಿನ ಸ್ಥಾನಮಾನ ಮತ್ತು ವ್ಯಕ್ತಿ ಸ್ವಾತಂತ್ರ್ಯದಂತಹ ವಿಷಯಗಳನ್ನು ಚರ್ಚಿಸಿ, ಸಾಮಾಜಿಕ ಪರಿವರ್ತನೆಗೆ ದಾರಿ ಮಾಡಿಕೊಟ್ಟಿದೆ.

ಬಸವಣ್ಣನವರ ವಚನವನ್ನು ಗಮನಿಸಬಹುದು

ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ;
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ.
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲಸಂಗಮದೇವ.

'ಕುಲಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನ್ನೇನಾದರೂ ಬಲ್ಲಿರಾ? ಎಂದು ಜಾತಿ ವ್ಯವಸ್ಥೆಯ ಬಗ್ಗೆ ತಮ್ಮ ಕೀರ್ತನೆಗಳ ಮೂಲಕ ಪ್ರಶ್ನಿಸಿ ಆತ್ಮಾವಲೋಕನಕ್ಕೆ ಕರೆಕೊಟ್ಟ ಸಂತ, ಕವಿ ಕನಕ ದಾಸರು.

ಕನ್ನಡ ಸಾಹಿತ್ಯದ ಸಾಮಾಜಿಕ ಓದಿನ ಪ್ರಮುಖ ಮುಖ್ಯಾಂಶಗಳು: ವಚನ ಚಳುವಳಿ (12ನೇ ಶತಮಾನ): ಸಾಮಾಜಿಕ ಸಮಾನತೆ ಮತ್ತು ಧಾರ್ಮಿಕ ಸುಧಾರಣೆ. ದಾಸ ಸಾಹಿತ್ಯ: ಭಕ್ತಿ ಮಾರ್ಗದ ಮೂಲಕ ಸಾಮಾಜಿಕ ಜಾಗೃತಿ. ನವೋದಯ ಮತ್ತು ಪ್ರಗತಿಶೀಲ ಸಾಹಿತ್ಯ: ಶೋಷಣೆ, ಜಾತಿ ಪದ್ಧತಿ ಮತ್ತು ಸಾಮಾಜಿಕ ಅಸಮಾನತೆಯ ವಿರುದ್ಧದ ಧ್ವನಿ. ದಲಿತ ಮತ್ತು ಬಂಡಾಯ ಸಾಹಿತ್ಯ: ಸಾಮಾಜಿಕ ನ್ಯಾಯ, ಹಕ್ಕುಗಳಿಗಾಗಿ ಹೋರಾಟ ಮತ್ತು ದಮನಿತರ ಧ್ವನಿ. ಮಹಿಳಾ ಸಾಹಿತ್ಯ: ಲಿಂಗ ಅಸಮಾನತೆ, ಹೆಣ್ಣಿನ ಹಕ್ಕುಗಳು ಮತ್ತು ಆಕೆಯ ಸಾಂಸ್ಕೃತಿಕ ಸ್ಥಾನಮಾನದ ವಿಮರ್ಶೆ.

ಸಾಮಾಜಿಕ ಓದು ಕನ್ನಡ ಸಾಹಿತ್ಯವನ್ನು ಕೇವಲ ಕಲೆಯಾಗಿ ನೋಡದೆ, ಸಮಾಜದ ಕನ್ನಡಿಯಾಗಿ ಮತ್ತು ಬದಲಾವಣೆಯ ಶಕ್ತಿಯಾಗಿ ಗುರುತಿಸುತ್ತದೆ. "ಕಾಯಕವೇ ಕೈಲಾಸ" ಎಂಬ ಬಸವಣ್ಣನ ವಚನವು ಶ್ರಮದ ಮಹತ್ವವನ್ನು ಪ್ರತಿಪಾದಿಸುತ್ತದೆ. ಈ ರೀತಿಯ ಸಾಹಿತ್ಯವು ಸಮಾಜದಲ್ಲಿ ಸಮಾನತೆ ಮತ್ತು ನ್ಯಾಯದ ಚಿಂತನೆಗೆ ಉತ್ತೇಜನ ನೀಡುತ್ತದೆ.

**ಸ್ತ್ರೀವಾದಿ ಓದು**

ಸ್ತ್ರೀವಾದಿ ಓದು ಸಾಹಿತ್ಯವನ್ನು ಮಹಿಳೆಯರ ಅನುಭವ ಮತ್ತು ದೃಷ್ಟಿಕೋಣದಿಂದ ಓದುವ ವಿಧಾನವಾಗಿದೆ. ಸಾಹಿತ್ಯದಲ್ಲಿ ಮಹಿಳೆಯರ ಪಾತ್ರ, ಅವರ ಮೇಲೆ ನಡೆದಿರುವ ಶೋಷಣೆ ಮತ್ತು ಲಿಂಗ ಅಸಮಾನತೆಗಳನ್ನು ಇಲ್ಲಿ ವಿಶ್ಲೇಷಿಸಲಾಗುತ್ತದೆ. ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಓದು ಎಂಬುದು ಪುರುಷ ಪ್ರಧಾನ ದೃಷ್ಟಿಕೋನವನ್ನು ಪ್ರಶ್ನಿಸಿ, ಮಹಿಳಾ ಅನುಭವಗಳು, ಅಸ್ತಿತ್ವ ಮತ್ತು ಹಕ್ಕುಗಳನ್ನು ಸಾಹಿತ್ಯದ ಮೂಲಕ ವಿಶ್ಲೇಷಿಸುವ ವಿಮರ್ಶಾತ್ಮಕ ವಿಧಾನವಾಗಿದೆ. ಇದು ಅಕ್ಕಮಹಾದೇವಿಯ ವಚನಗಳ ಬಂಡಾಯದಿಂದ ಹಿಡಿದು ಇಂದಿನ ಬಂಡಾಯ-ದಲಿತ ಸಾಹಿತ್ಯದವರೆಗಿನ ಸ್ತ್ರೀ ಸಂವೇದನೆಯನ್ನು, ಪುರುಷ ಸಮಾಜದ ನಿರೂಪಣೆಗಳನ್ನು ಪುನರ್ವ್ಯಾಖ್ಯಾನಿಸಲು ಬಳಸಲಾಗುತ್ತದೆ.

ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಓದಿನ ಮುಖ್ಯ ಮುಖ್ಯಾಂಶಗಳು: ಐತಿಹಾಸಿಕ ಬೆಳವಣಿಗೆ: 12ನೇ ಶತಮಾನದ ವಚನ ಸಾಹಿತ್ಯದಲ್ಲಿ ಅಕ್ಕಮಹಾದೇವಿ, ಲಕ್ಕಮ್ಮ ಮುಂತಾದವರು ಲಿಂಗ ತಾರತಮ್ಯವನ್ನು ಪ್ರಶ್ನಿಸಿದರು. ನಂತರದ ದಿನಗಳಲ್ಲಿ, ವಿಶೇಷವಾಗಿ 1970-80ರ ದಶಕದ ಬಂಡಾಯ ಸಾಹಿತ್ಯದಲ್ಲಿ ಸ್ತ್ರೀವಾದಿ ಧ್ವನಿ ಬಲವಾಯಿತು.

ಸಾಹಿತ್ಯಿಕ ವಿಮರ್ಶೆ: ಸಾಂಪ್ರದಾಯಿಕ ಕೃತಿಗಳಲ್ಲಿ ಹೆಣ್ಣನ್ನು ಕೇವಲ ಭೋಗದ ವಸ್ತುವಾಗಿ ಅಥವಾ ತ್ಯಾಗಮಯಿಯಾಗಿ ಚಿತ್ರಿಸುವುದನ್ನು ಸ್ತ್ರೀವಾದಿ ವಿಮರ್ಶೆಯು ಖಂಡಿಸುತ್ತದೆ. ಪ್ರಮುಖ ಲೇಖಕಿಯರು: ಅನುಪಮಾ ನಿರಂಜನ, ವೈದೇಹಿ, ಸಾರಾ ಅಬೂಬಕ್ಕರ್, ಚಂದ್ರಕಲಾ ನಂದನವರ್ಮ, ಬಾನು ಮುಷ್ತಾಕ್, ಮತ್ತು ಇತ್ತೀಚಿನ ತಲೆಮಾರಿನ ಲೇಖಕಿಯರು ತಮ್ಮ ಕೃತಿಗಳ ಮೂಲಕ ಮಹಿಳಾ ಶೋಷಣೆ, ಅಸ್ತಿತ್ವ ಮತ್ತು ಲೈಂಗಿಕತೆಯನ್ನು ಮುಕ್ತವಾಗಿ ಚರ್ಚಿಸಿದ್ದಾರೆ. ವಿಷಯಗಳು: ಹೆಣ್ಣಿನ ದೈಹಿಕತೆ, ಗೃಹಕೃತ್ಯದ ಹೊರೆ, ಶಿಕ್ಷಣದ ಹಕ್ಕು, ಲೈಂಗಿಕ ಶೋಷಣೆ, ಮತ್ತು ವೈವಾಹಿಕ ಜೀವನದಲ್ಲಿನ ಬಂಧನಗಳು ಸ್ತ್ರೀವಾದಿ ಓದಿನ ಮುಖ್ಯ ವಿಷಯಗಳಾಗಿವೆ.

ಕನ್ನಡ ಸಾಹಿತ್ಯದಲ್ಲಿ ಮಹಿಳಾ ಲೇಖಕಿಯರ ಕೃತಿಗಳು ಮತ್ತು ಮಹಿಳೆಯರ ಜೀವನವನ್ನು ಚಿತ್ರಿಸುವ ಕೃತಿಗಳನ್ನು ಈ ದೃಷ್ಟಿಯಿಂದ ಅಧ್ಯಯನ ಮಾಡಬಹುದು. ಸ್ತ್ರೀವಾದಿ ಓದು ಸಾಹಿತ್ಯದಲ್ಲಿ ಮಹಿಳೆಯರ ಸ್ಥಾನವನ್ನು ಹೊಸ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.

**ಮಾರ್ಕ್ಸ್‌ವಾದಿ ಓದು**

ಮಾರ್ಕ್ಸ್‌ವಾದಿ ಓದು ಸಾಹಿತ್ಯವನ್ನು ಆರ್ಥಿಕ ವ್ಯವಸ್ಥೆ ಮತ್ತು ವರ್ಗಸಂಘರ್ಷದ ದೃಷ್ಟಿಯಿಂದ ವಿಶ್ಲೇಷಿಸುತ್ತದೆ. ಸಮಾಜದಲ್ಲಿರುವ ಬಡವರು ಮತ್ತು ಶ್ರೀಮಂತರ ನಡುವಿನ ಅಸಮಾನತೆಗಳನ್ನು ಇಲ್ಲಿ ಪರಿಶೀಲಿಸಲಾಗುತ್ತದೆ.

ಕನ್ನಡ ಸಾಹಿತ್ಯದಲ್ಲಿ ಮಾರ್ಕ್ಸ್‌ವಾದವು (ಮಾರ್ಕ್ಸ್ ವಾದ - ವಿಕಿಪೀಡಿಯ) ಶೋಷಣೆ, ವರ್ಗ ಹೋರಾಟ, ಮತ್ತು ಸಾಮಾಜಿಕ ಸಮಾನತೆಯನ್ನು ಪ್ರತಿಪಾದಿಸುವ ಪ್ರಮುಖ ಪ್ರಗತಿಶೀಲ ಚಿಂತನೆಯಾಗಿದೆ. ಇದು ಬಂಡವಾಳಶಾಹಿ ವ್ಯವಸ್ಥೆಯ ವಿಮರ್ಶೆ, ಕಾರ್ಮಿಕರ ಹಕ್ಕುಗಳು ಮತ್ತು ದಮನಿತರ ಧ್ವನಿಯಾಗಿ ಸಾಹಿತ್ಯ, ವಿಮರ್ಶೆ (ಮಾರ್ಕ್ಸ್ವಾದಿ ಸಾಹಿತ್ಯ ವಿಮರ್ಶೆ - ವಿಕಿಪೀಡಿಯ) ಹಾಗೂ ರಂಗಭೂಮಿಯಲ್ಲಿ ಪ್ರಭಾವ ಬೀರಿದೆ. ನಿರಂಜನ, ಎನ್.ಎಸ್.ವಿ, ಮತ್ತು ಬಂಜಗೆರೆ ಜಯಪ್ರಕಾಶ್ ಮುಂತಾದವರು ಈ ಧಾರೆಗೆ ಕೊಡುಗೆ ನೀಡಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಮಾರ್ಕ್ಸ್‌ವಾದಿ ಅಂಶಗಳು: ಸಾಮಾಜಿಕ ಸಮಾನತೆ ಮತ್ತು ವರ್ಗ ಹೋರಾಟ: ಮಾರ್ಕ್ಸ್‌ವಾದಿ ಚಿಂತಕರು ಬಸವಣ್ಣನವರ ಸಮಾನತಾ ಧರ್ಮ ಮತ್ತು ಕಾಯಕ ತತ್ವಗಳನ್ನು ಮಾರ್ಕ್ಸ್‌ವಾದದ ಮಾನವೀಯ ಮೌಲ್ಯಗಳೊಂದಿಗೆ ಬೆಸೆದು ನೋಡುತ್ತಾರೆ. ಶೋಷಣೆಯ ವಿಮರ್ಶೆ: ಬಂಡವಾಳಶಾಹಿ ವ್ಯವಸ್ಥೆಯು ಹೇಗೆ ಶ್ರಮಿಕರನ್ನು ಶೋಷಿಸುತ್ತದೆ ಎಂಬುದನ್ನು ಮಾರ್ಕ್ಸ್‌ವಾದಿ ಸಾಹಿತ್ಯವು ಅನಾವರಣಗೊಳಿಸುತ್ತದೆ. ಸಾಹಿತ್ಯ ಮತ್ತು ಪ್ರಜ್ಞೆ: "ಸಾಮಾಜಿಕ ಅಸ್ತಿತ್ವವು ಅವರ ಪ್ರಜ್ಞೆಯನ್ನು ನಿರ್ಧರಿಸುತ್ತದೆ" ಎಂಬ ತತ್ವದಡಿ, ಕೃತಿಗಳನ್ನು ಸಾಮಾಜಿಕ ಮತ್ತು ಭೌತಿಕ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗುತ್ತದೆ.

ಪ್ರಮುಖ ಚಿಂತಕರು/ಲೇಖಕರು: ಕ.ವೆಂ.ರಾಜಗೋಪಾಲ ಅವರಂತಹವರು ಮಾರ್ಕ್ಸ್‌ವಾದಿ ಚಿಂತನೆಯನ್ನು ಸಾಹಿತ್ಯ ವಿಮರ್ಶೆಗೆ ಅಳವಡಿಸಿದ್ದರು. ಸೈದ್ಧಾಂತಿಕ ಮೂಲಗಳು: ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡ್ರಿಕ್ ಎಂಗೆಲ್ಸ್ ಅವರ ಕೃತಿಗಳಾದ 'ದ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ' ಮತ್ತು 'ದಾಸ್ ಕ್ಯಾಪಿಟಲ್' ಕನ್ನಡದ ಪ್ರಗತಿಶೀಲ ಚಿಂತನೆಗೆ ಅಡಿಪಾಯವಾಗಿವೆ. ಮಾರ್ಕ್ಸ್‌ವಾದವು ಕನ್ನಡ ಸಾಹಿತ್ಯದಲ್ಲಿ ಕೇವಲ ರಾಜಕೀಯ ಸಿದ್ಧಾಂತವಾಗಿ ಉಳಿಯದೆ, ಮಾನವೀಯತೆ, ನ್ಯಾಯ ಮತ್ತು ಸಮಾನತೆಯನ್ನು ಬಯಸುವ

ವೈಜ್ಞಾನಿಕ ವಿಶ್ವದೃಷ್ಟಿಕೋನವಾಗಿ ವಿಕಸನಗೊಂಡಿದೆ. ಕನ್ನಡ ಸಾಹಿತ್ಯದಲ್ಲಿ ಕಾರ್ಮಿಕರ ಜೀವನ ಮತ್ತು ಬಡತನವನ್ನು ಚಿತ್ರಿಸುವ ಕೃತಿಗಳನ್ನು ಈ ದೃಷ್ಟಿಯಿಂದ ಓದಬಹುದು. ಈ ಓದು ಸಾಹಿತ್ಯವನ್ನು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತದೆ.

**ಮನೋವೈಜ್ಞಾನಿಕ ಓದು**

ಮನೋವೈಜ್ಞಾನಿಕ ಓದು ಸಾಹಿತ್ಯದ ಪಾತ್ರಗಳ ಮನಸ್ಥಿತಿಯನ್ನು ವಿಶ್ಲೇಷಿಸುವ ವಿಧಾನವಾಗಿದೆ. ಈ ಓದಿನಲ್ಲಿ ಪಾತ್ರಗಳ ಒಳಜಗತ್ತು, ಭಾವನೆಗಳು ಮತ್ತು ಮನಸ್ಸಿನ ಸಂಘರ್ಷಗಳನ್ನು ಅಧ್ಯಯನ ಮಾಡಲಾಗುತ್ತದೆ.

ಸಾಹಿತ್ಯವನ್ನು ಅರ್ಥಮಾಡಿಕೊಳ್ಳುವ ವಿವಿಧ ವಿಧಾನಗಳಲ್ಲಿ ಮನೋವೈಜ್ಞಾನಿಕ ಓದು (Psychological Reading) ಒಂದು ಪ್ರಮುಖ ವಿಧಾನವಾಗಿದೆ. ಈ ವಿಧಾನದಲ್ಲಿ ಸಾಹಿತ್ಯ ಕೃತಿಗಳನ್ನು ಕೇವಲ ಕಥಾ–ವಸ್ತು ಅಥವಾ ಭಾಷೆಯ ದೃಷ್ಟಿಯಿಂದ ಮಾತ್ರವಲ್ಲ, ಮಾನವನ ಮನಸ್ಸು, ಅವನ ಅಂತರಂಗದ ಭಾವನೆಗಳು, ಆಸೆಗಳು, ಭಯಗಳು, ಸಂಕೀರ್ಣತೆಗಳು ಮತ್ತು ಅಜ್ಞಾತ ಮನಸ್ಸಿನ ಚಟುವಟಿಕೆಗಳ ದೃಷ್ಟಿಯಿಂದ ವಿಶ್ಲೇಷಿಸಲಾಗುತ್ತದೆ.

ಮನೋವಿಜ್ಞಾನ ಮತ್ತು ಸಾಹಿತ್ಯದ ಸಂಯೋಜನೆಯಿಂದ ಹುಟ್ಟಿದ ಈ ವಿಧಾನದಲ್ಲಿ ಪಾತ್ರಗಳ ವರ್ತನೆ, ಮನಸ್ಥಿತಿ ಮತ್ತು ಲೇಖಕರ ಅಂತರಂಗದ ಪ್ರೇರಣೆಗಳನ್ನು ಅನ್ವೇಷಿಸುವುದು ಮುಖ್ಯವಾಗುತ್ತದೆ.

ಮನೋವೈಜ್ಞಾನಿಕ ಓದಿನ ಅರ್ಥ: ಮನೋವೈಜ್ಞಾನಿಕ ಓದು ಎಂದರೆ ಸಾಹಿತ್ಯವನ್ನು ಮಾನವನ ಮನಸ್ಸಿನ ಕಾರ್ಯವೈಖರಿ ಆಧಾರವಾಗಿ ಓದುದು. ಇಲ್ಲಿ ಮುಖ್ಯವಾಗಿ ಗಮನಿಸುವ ಅಂಶಗಳು:

- ಪಾತ್ರಗಳ ಮನೋಭಾವನೆ
- ಅಂತರಂಗದ ಸಂಘರ್ಷ
- ಆಸೆ–ಆಕಾಂಕ್ಷೆಗಳು
- ಅಜ್ಞಾತ ಮನಸ್ಸಿನ ಪ್ರಭಾವ
- ವ್ಯಕ್ತಿತ್ವದ ರೂಪುಗೊಳಿಕೆ

ಈ ವಿಧಾನದಲ್ಲಿ ಪಾತ್ರಗಳು ಹೇಗೆ ಯೋಚಿಸುತ್ತವೆ, ಅವರ ನಿರ್ಧಾರಗಳ ಹಿಂದೆ ಇರುವ ಮನೋಸ್ಥಿತಿ ಏನು ಎಂಬುದನ್ನು ಪರಿಶೀಲಿಸಲಾಗುತ್ತದೆ. ಮನೋವೈಜ್ಞಾನಿಕ ತತ್ತ್ವಗಳ ಹಿನ್ನೆಲೆಯೆಂದರೆ ಮನೋವೈಜ್ಞಾನಿಕ ಓದು ಮುಖ್ಯವಾಗಿ ಕೆಲವು ಪ್ರಮುಖ ಮನೋವಿಜ್ಞಾನಿಗಳ ತತ್ತ್ವಗಳ ಮೇಲೆ ಆಧಾರಿತವಾಗಿದೆ:

ಸಿಗ್ಮಂಡ್ ಫ್ರಾಯ್ಡ್ – ಅಜ್ಞಾತ ಮನಸ್ಸು, ಕನಸು, ದಮನ (repression)

ಕಾರ್ಲ್ ಜುಂಗ್ – ಸಮೂಹ ಅಜ್ಞಾತ ಮನಸ್ಸು (collective unconscious)

ಆಡ್ಲರ್ – ಹೀನತೆ ಸಂಕೋಚ (inferiority complex)

ಈ ತತ್ತ್ವಗಳು ಸಾಹಿತ್ಯದಲ್ಲಿನ ಪಾತ್ರಗಳ ಅಂತರಂಗವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ. ಕನ್ನಡ ಸಾಹಿತ್ಯದಲ್ಲಿ ಮನೋವೈಜ್ಞಾನಿಕ ಓದಿನ ಬೆಳವಣಿಗೆಯು ಕನ್ನಡ ಸಾಹಿತ್ಯದಲ್ಲಿ ನವೋದಯ ಮತ್ತು ನವ್ಯ ಕಾಲದಲ್ಲಿ ಮನೋವೈಜ್ಞಾನಿಕ ಓದಿನ ಪ್ರಭಾವ ಹೆಚ್ಚು ಕಂಡುಬರುತ್ತದೆ. ವಿಶೇಷವಾಗಿ ಕಾದಂಬರಿ ಮತ್ತು ಕಥಾಸಾಹಿತ್ಯದಲ್ಲಿ ಪಾತ್ರಗಳ ಒಳಜೀವನವನ್ನು ವಿಶ್ಲೇಷಿಸುವ ಪ್ರಯತ್ನಗಳು ಹೆಚ್ಚಾಗಿವೆ. ಪ್ರಮುಖ ಲಕ್ಷಣಗಳು

- ಪಾತ್ರಗಳ ಅಂತರಂಗದ ವಿಶ್ಲೇಷಣೆ
- ವ್ಯಕ್ತಿಯ ಒಂಟಿತನ ಮತ್ತು ಅಸ್ತಿತ್ವದ ಸಂಕಟ
- ಸಾಮಾಜಿಕ ಒತ್ತಡಗಳಿಂದ ಉಂಟಾಗುವ ಮನೋಸಂಕಷ್ಟ
- ಅಜ್ಞಾತ ಮನಸ್ಸಿನ ಪ್ರಭಾವ

ಕನ್ನಡ ಕೃತಿಗಳಲ್ಲಿ ಮನೋವೈಜ್ಞಾನಿಕ ಅಂಶಗಳೆಂದರೆ ಯು.ಆರ್. ಅನಂತಮೂರ್ತಿ – 'ಸಂಸ್ಕಾರ' ಈ ಕಾದಂಬರಿಯಲ್ಲಿ ಪ್ರಾಣೇಶಾಚಾರ್ಯನ ಪಾತ್ರದ ಮೂಲಕ ಮನೋವೈಜ್ಞಾನಿಕ ಸಂಘರ್ಷವನ್ನು ಚಿತ್ರಿಸಲಾಗಿದೆ. ಧಾರ್ಮಿಕ ಮೌಲ್ಯಗಳು ಮತ್ತು ಮಾನವೀಯ ಆಸೆಗಳ ನಡುವಿನ ಅಂತರಂಗದ ಸಂಘರ್ಷವು ಪಾತ್ರದ ಮನಸ್ಥಿತಿಯನ್ನು ತೀವ್ರವಾಗಿ ಬಿಂಬಿಸುತ್ತದೆ. ಶಿವರಾಮ ಕಾರಂತ ಕೆಲವು ಕೃತಿಗಳಲ್ಲಿ ವ್ಯಕ್ತಿಯ ಮನಸ್ಸಿನ ಆಳವಾದ ಚಿತ್ರಣ ಕಾಣುತ್ತದೆ. ಸಾಮಾಜಿಕ ಬದಲಾವಣೆಗಳು ವ್ಯಕ್ತಿಯ ಮನೋಭಾವನೆ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಅವರು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಕುವೆಂಪು – 'ಕಾನೂರು ಹೆಗ್ಗಡತಿ' ಈ ಕೃತಿಯಲ್ಲಿ ವ್ಯಕ್ತಿಯ ಮನಸ್ಸಿನ ಸಂಘರ್ಷ, ಸಂಬಂಧಗಳ ಮನೋವೈಜ್ಞಾನಿಕ ಆಯಾಮಗಳು ಮತ್ತು ಸಾಮಾಜಿಕ ಮೌಲ್ಯಗಳ ನಡುವಿನ ಸಂಘರ್ಷವನ್ನು ಕಾಣಬಹುದು. ನವ್ಯ ಸಾಹಿತ್ಯದ ಕಾಲದ ಕಥೆಗಳಲ್ಲಿ ವ್ಯಕ್ತಿಯ ಒಂಟಿತನ, ಅಸ್ತಿತ್ವದ ಸಂಕಟ, ಮನಸ್ಸಿನ ಗೊಂದಲ ಮುಂತಾದ ಅಂಶಗಳು ಹೆಚ್ಚಾಗಿ ಕಾಣುತ್ತವೆ. ಇದು ಮನೋವೈಜ್ಞಾನಿಕ ಓದಿಗೆ ಸೂಕ್ತವಾದ ಕ್ಷೇತ್ರವಾಗಿದೆ.

ಫ್ರಾಯ್ಡ್ ಮತ್ತು ಜುಂಗ್ ಅವರ ಮನೋವಿಜ್ಞಾನ ಸಿದ್ಧಾಂತಗಳು ಈ ಓದಿಗೆ ಪ್ರೇರಣೆಯಾಗಿವೆ. ಕಥೆಗಳು ಮತ್ತು ಕಾದಂಬರಿಗಳ ಪಾತ್ರಗಳನ್ನು ಈ ದೃಷ್ಟಿಯಿಂದ ವಿಶ್ಲೇಷಿಸುವ ಮೂಲಕ ಸಾಹಿತ್ಯದ ಆಳವಾದ ಅರ್ಥವನ್ನು ತಿಳಿಯಬಹುದು.

**ವಾಚಕ ಕೇಂದ್ರಿತ ಓದು**

ವಾಚಕ ಕೇಂದ್ರಿತ ಓದು ಸಾಹಿತ್ಯದಲ್ಲಿ ಓದುಗರ ಪಾತ್ರವನ್ನು ಪ್ರಮುಖವಾಗಿ ಪರಿಗಣಿಸುತ್ತದೆ. ಈ ಓದಿನಲ್ಲಿ ಕೃತಿಯ ಅರ್ಥವು ಓದುಗರ ಅನುಭವದಿಂದ ನಿರ್ಮಾಣವಾಗುತ್ತದೆ. ಪ್ರತಿ ಓದುಗನು ತನ್ನ ಅನುಭವ ಮತ್ತು ಜ್ಞಾನಕ್ಕೆ ಅನುಗುಣವಾಗಿ ಕೃತಿಯನ್ನು ವಿಭಿನ್ನ ರೀತಿಯಲ್ಲಿ ಅರ್ಥಮಾಡಿಕೊಳ್ಳುತ್ತಾನೆ. ಆದ್ದರಿಂದ ಒಂದೇ ಕೃತಿಗೆ ಅನೇಕ ವ್ಯಾಖ್ಯಾನಗಳು ಸಾಧ್ಯವಾಗುತ್ತವೆ.

**ಉತ್ತರಾಧುನಿಕ ಓದು**

ಉತ್ತರಾಧುನಿಕ ಓದು ಸಾಹಿತ್ಯವನ್ನು ಬಹುಅರ್ಥಗಳ ದೃಷ್ಟಿಯಿಂದ ವಿಶ್ಲೇಷಿಸುತ್ತದೆ. ಈ ಓದಿನಲ್ಲಿ ಒಂದೇ ಸತ್ಯ ಅಥವಾ ಒಂದೇ ಅರ್ಥವಿಲ್ಲ ಎಂಬ ಕಲ್ಪನೆ ಮುಖ್ಯವಾಗಿದೆ. ಪಠ್ಯದಲ್ಲಿ ಇರುವ ವೈವಿಧ್ಯತೆ, ವಿರೋಧಾಭಾಸಗಳು ಮತ್ತು ಅರ್ಥಗಳ

ಬಹುಮಟ್ಟಗಳನ್ನು ಇಲ್ಲಿ ಗಮನಿಸಲಾಗುತ್ತದೆ. ಈ ಓದು ಸಾಹಿತ್ಯವನ್ನು ಹೆಚ್ಚು ಮುಕ್ತ ಮತ್ತು ವೈವಿಧ್ಯಮಯ ದೃಷ್ಟಿಯಿಂದ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.

ಒಟ್ಟಾರೆ ನೋಡಿದರೆ, ಕನ್ನಡ ಸಾಹಿತ್ಯದ ಓದಿನ ವಿಭಿನ್ನ ರೂಪಗಳು ಸಾಹಿತ್ಯದ ಅರ್ಥವನ್ನು ಹೆಚ್ಚು ಸಮಗ್ರವಾಗಿ ಗ್ರಹಿಸಲು ಸಹಾಯಕವಾಗುತ್ತವೆ. ಸಾಹಿತ್ಯವು ಕೇವಲ ಕಥೆ ಅಥವಾ ಕಾವ್ಯದ ರೂಪದಲ್ಲಿ ಮಾತ್ರ ಇರುವುದಲ್ಲ. ಅದು ಸಮಾಜ, ಸಂಸ್ಕೃತಿ, ಇತಿಹಾಸ ಮತ್ತು ಮಾನವನ ಮನೋಭಾವನೆಗಳ ಪ್ರತಿಬಿಂಬವಾಗಿರುತ್ತದೆ. ಆದ್ದರಿಂದ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ವಿವಿಧ ಓದುವ ವಿಧಾನಗಳು ಅವಶ್ಯಕವಾಗುತ್ತವೆ.

ಸಾಮಾಜಿಕ ಓದು, ಇತಿಹಾಸಾತ್ಮಕ ಓದು, ಮನೋವೈಜ್ಞಾನಿಕ ಓದು, ಸ್ತ್ರೀವಾದಿ ಓದು, ದಲಿತ ಓದು, ಸಾಂಸ್ಕೃತಿಕ ಓದು ಮುಂತಾದ ವಿವಿಧ ವಿಧಾನಗಳು ಸಾಹಿತ್ಯದ ಬೇರೆಬೇರೆ ಆಯಾಮಗಳನ್ನು ಅನಾವರಣಗೊಳಿಸುತ್ತವೆ. ಈ ವಿಧಾನಗಳ ಮೂಲಕ ಸಾಹಿತ್ಯದಲ್ಲಿರುವ ಸಾಮಾಜಿಕ ರಚನೆ, ಅಧಿಕಾರ ಸಂಬಂಧಗಳು, ಲಿಂಗಸಂಬಂಧಿ ಪ್ರಶ್ನೆಗಳು, ವರ್ಗ–ಜಾತಿ ಸಮಸ್ಯೆಗಳು ಮತ್ತು ಮಾನವನ ಅಂತರಂಗದ ಮನೋಭಾವನೆಗಳು ಹೆಚ್ಚು ಸ್ಪಷ್ಟವಾಗುತ್ತವೆ. ಕನ್ನಡ ಸಾಹಿತ್ಯದ ಅಧ್ಯಯನದಲ್ಲಿ ಈ ವಿಭಿನ್ನ ಓದುವ ರೂಪಗಳನ್ನು ಬಳಕೆ ಮಾಡುವುದು ಅತ್ಯಂತ ಅಗತ್ಯವಾಗಿದೆ. ಅವು ಸಾಹಿತ್ಯವನ್ನು ಒಂದೇ ದೃಷ್ಟಿಯಿಂದ ಅಲ್ಲದೆ, ಬಹುಮುಖವಾಗಿ ತಿಳಿಯುವ ಅವಕಾಶವನ್ನು ನೀಡುತ್ತವೆ. ಇದರ ಮೂಲಕ ಸಾಹಿತ್ಯದ ಅರ್ಥವ್ಯಾಪ್ತಿ ವಿಸ್ತಾರವಾಗುವುದರ ಜೊತೆಗೆ, ಓದುಗರಲ್ಲಿ ವಿಮರ್ಶಾತ್ಮಕ ಚಿಂತನೆ ಮತ್ತು ವಿಶ್ಲೇಷಣಾತ್ಮಕ ದೃಷ್ಟಿಯೂ ಬೆಳೆಯುತ್ತದೆ.

ಆದ್ದರಿಂದ, ಕನ್ನಡ ಸಾಹಿತ್ಯವನ್ನು ಆಳವಾಗಿ ಅರಿತುಕೊಳ್ಳಲು ವಿಭಿನ್ನ ಓದಿನ ವಿಧಾನಗಳ ಸಮನ್ವಯ ಅಗತ್ಯವಾಗಿದ್ದು, ಅದು ಸಾಹಿತ್ಯ ಅಧ್ಯಯನವನ್ನು ಹೆಚ್ಚು ಸಮೃದ್ಧ ಮತ್ತು ಅರ್ಥಪೂರ್ಣವಾಗಿಸುತ್ತದೆ. ಇಂದಿನ ಕಾಲದಲ್ಲಿ ಸಾಹಿತ್ಯ ಓದಿನ ವಿಧಾನಗಳು ಇನ್ನಷ್ಟು ವಿಸ್ತಾರಗೊಂಡಿವೆ. ತಂತ್ರಜ್ಞಾನ ಅಭಿವೃದ್ಧಿಯ ಪರಿಣಾಮವಾಗಿ ಡಿಜಿಟಲ್ ಓದು ಮತ್ತು ಅಂತರ್ಜಾಲದ ಮೂಲಕ ಸಾಹಿತ್ಯವನ್ನು ಅಧ್ಯಯನ ಮಾಡುವ ಅವಕಾಶಗಳು ಹೆಚ್ಚಾಗಿವೆ. ವಿಭಿನ್ನ ಓದುವ ವಿಧಾನಗಳು ಸಾಹಿತ್ಯದ ಅರ್ಥವನ್ನು ಆಳವಾಗಿ ತಿಳಿಯಲು ಸಹಾಯ ಮಾಡುತ್ತವೆ.

.ಈ ಎಲ್ಲ ಓದುಗಳು ಪರಸ್ಪರ ಪೂರಕವಾಗಿದ್ದು ಸಾಹಿತ್ಯದ ಸಮಗ್ರ ಅರ್ಥವನ್ನು ನೀಡುತ್ತವೆ. ಆದ್ದರಿಂದ ಕನ್ನಡ ಸಾಹಿತ್ಯ ಅಧ್ಯಯನದಲ್ಲಿ ವಿಭಿನ್ನ ಓದುವ ವಿಧಾನಗಳನ್ನು ಬಳಸುವುದು ಅತ್ಯಂತ ಅಗತ್ಯವಾಗಿದೆ. ಮುದ್ರಿತ ಸಾಹಿತ್ಯ: ಪುಸ್ತಕ, ಪತ್ರಿಕೆ, ನಿಯತಕಾಲಿಕೆಗಳ ಮೂಲಕ ಸಾಂಪ್ರದಾಯಿಕ ಓದು. ಡಿಜಿಟಲ್/ಇ-ಸಾಹಿತ್ಯ: ಇ-ಪುಸ್ತಕಗಳು (E-books), ಬ್ಲಾಗ್, ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಆಧುನಿಕ ಓದು. ಶ್ರವಣ ಸಾಹಿತ್ಯ: ಆಡಿಯೊಬುಕ್, ಕಾವ್ಯ ವಾಚನಗಳ ಮೂಲಕ ಕೇಳುವ ಓದು. ಕನ್ನಡ ಸಾಹಿತ್ಯವು ಪಂಪನ ಕಾವ್ಯದಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿ ವಿಜೇತ ಕೃತಿಗಳವರೆಗೆ ಓದುಗನಿಗೆ ವೈವಿಧ್ಯಮಯ ಅನುಭವಗಳನ್ನು ಒದಗಿಸುತ್ತದೆ.

**ಪರಾಮರ್ಶನ ಗ್ರಂಥಗಳು**

೧. ಗಿರಡ್ಡಿ ಗೋವಿಂದರಾಜ (ಸಂ.), 'ಓದುವ ದಾರಿಗಳು', ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೨.

೨. ವೀರಣ್ಣ ದಂಡೆ, ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ-ಸಂಪುಟ-೮; ಜನಪದ ಸಾಹಿತ್ಯ ಚರಿತ್ರೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೫.

೩. ಡಾ. ವೀರಣ್ಣ ರಾಜೂರ (ಸಂ.), ಶಿವಶರಣೆಯರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೨೧.

೪. ಸತ್ಯಮೂರ್ತಿ ಹೆಚ್, ಕನ್ನಡದಲ್ಲಿ ಭಾಷಾಂತರ ಕುರಿತ ಚಿಂತನೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೧.

೫. ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ-ಎಂ. ಗಣಪತಿರಾವ್ ಐಗಳ್-ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ, ೧೯೨೩.

೬. ಸಮಗ್ರ ಕೃತಿಗಳ ಸಮೀಕ್ಷೆ, ಬಿ. ಎಸ್. ಸ್ವಾಮಿ, ಜಗನ್ನಾಥ ಪ್ರಿಂಟರ್ಸ್, ಬೆಂಗಳೂರು, ೨೦೧೯.

೭. ಚಂದ್ರಿಕಾ ಪಿ. (ಸಂ.), ಮಹಿಳಾ ಸಾಹಿತ್ಯ ಸಂಪುಟ ಕಾವ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೨೦.

೮. ಶ್ರೀಮತಿ ಎಚ್. ಎಸ್, ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ. ೨೦೦೬.

೯. ಸತ್ಯಮೂರ್ತಿ ಹೆಚ್. ಕನ್ನಡದಲ್ಲಿ ಭಾಷಾಂತರ ಕುರಿತ ಚಿಂತನೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೧.

೧೦. ಶೇಷಗಿರಿರಾವ್ ಎಲ್. ಎಸ್., ಹೊಸಗನ್ನಡ ಸಾಹಿತ್ಯ ಚರಿತ್ರೆ, ಸಪ್ನ ಬುಕ್ ಹೌಸ್, ಬೆಂಗಳೂರು-೨೦೨೦

೧೧. ರಂ. ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು, 2024.

೧೨. ಕನ್ನಡ ಕವಿ ಚರಿತ್ರೆ ಸಂಪುಟ-2, ಹೀ.ಚಿ. ಶಾಂತವೀರಯ್ಯ, ಅಕ್ಷರ ಮಂಟಪ ಪ್ರಕಾಶನ, ಹಂಪಿನಗರ, ಬೆಂಗಳೂರು, 2017.

೧೩. ಕೇಶವಶರ್ಮ ಕೆ. ವಸಾಹತು ಅನುಭವ, ರೂಪ ಪ್ರಕಾಶನ, ಶಿವಮೊಗ್ಗ, ೨೦೧೨.

೧4..ಕನ್ನಡದಲ್ಲಿಶಾಸ್ತ್ರಸಾಹಿತ್ಯ - ವಿಕಿಪೀಡಿಯ (https://share.google/aMa7mJNGX1axnjQNa)

15. ಇ. ಪಿ. ರೈಸ್, A History of Kanarese Literature (೧೯೧೫/೨ನೇ ಆವೃತ್ತಿ),